## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## Crl Misc. ಸಂಖ್ಯೆ: 101 /2023

**ಸಾಕ್ಷಿಯನ್ನು ದಿಃ 25.09.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | |
|---|---|---|
| ಹೆಸರು | ಪೂರ್ಣಿಮ ಅಲಿಯಾಸ್ ರಾಧ | ಪಿ ಡಬ್ಲ್ಯೂಃ 1 |
| ಗಂಡನ ಹೆಸರು | ವೆಂಕಟೇಶ್ ಅಲಿಯಾಸ್ ಪುಟ್ಟ | |
| ವಯಸ್ಸು | 31 ವರ್ಷ | |
| ಕೆಲಸ | ಗೃಹಿಣಿ . | |
| ವಾಸಸ್ಥಳ | ಹುಣಸೂರು | |

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ. ಹೆಚ್.ಆರ್.ವಿ ವಕೀಲರಿಂದಃ**

ದಿಃ 01.05.2009 ರಂದು ನನ್ನ ಮತ್ತು ಎದುರುದಾರರ ಮದುವೆ ಗೌಡಗೆರೆಯ ಬಸವೇಶ್ವರಸ್ವಾಮಿ ದೇವಸ್ಥಾನದಲ್ಲಿ ನಡೆಯಿತು. ಮದುವೆಯಾದ ನಂತರ ನಾವಿಬ್ಬರು ಸುಮಾರು 12 ವರ್ಷ ಚೆನ್ನಾಗಿದ್ದೆವು. ಮದುವೆಯಾದ 4 ವರ್ಷದ ನಂತರ ನಮಗೆ ಹೆಣ್ಣು ಮಗು ಜನಿಸಿತು. ಎದುರುದಾರರು ಬಂಧನ, ಆಶೀರ್ವಾದ ಮತ್ತು ಗ್ರಾಮಿಣ ಸಂಘಗಳಿಂದ ನನ್ನ ಮೂಲಕ ಸಾಲ ತೆಗೆಸಿಕೊಂಡರು. ಸದರಿ ಸಾಲವನ್ನು ಸ್ವಲ್ಪ ದಿನ ನಾನೇ ಕಟ್ಟಿದೆ. ಸಾಲ ಕಟ್ಟಬೇಕು ಎಂದು ನಾನು ಕೇಳಿದಾಗ ಎದುರುದಾರರು ನನ್ನ ಜೊತೆ ಜಗಳ ತೆಗೆದರು. ನಾನು ಸಾಲ ಕಟ್ಟಲು ಬೇರೆಯವರ ಬಳಿ ಹಣ ಕೇಳಿದಾಗ ನನ್ನ ಮೇಲೆ ಅನುಮಾನ ಪಡುತ್ತಿದ್ದರು. ಎದುರುದಾರರು ಅವರ ತಂದೆ ತಾಯಿಯ ಮಾತುಕೇಳಿ ನನ್ನ ಜೊತೆ ಜಗಳ ತೆಗೆಯುತ್ತಿದ್ದರು. ನಾನು ತುಂಬಾ ದಿನ ಜಗಳವನ್ನು ತಡೆದುಕೊಂಡು ನಂತರ ಬೇಸರಗೊಂಡು ಮೈಸೂರಿನಲ್ಲಿರುವ ನನ್ನ ಅಕ್ಕನ ಮನೆಗೆ ಹೋದೆ. ಯಾಕೆ ಕರೆದುಕೊಂಡು ಹೋಗಿದ್ದೀರಿ ಎಂದು ಎದುರುದಾರರು ನನ್ನ ಅಕ್ಕನ ಜೊತೆ ಜಗಳ ಪ್ರಾರಂಭಿಸಿದರು. ಅಲ್ಲಿ ಸ್ವಲ್ಪ ಬಾವನ ಸಮಸ್ಯೆ ಇದ್ದ ಕಾರಣ ನಾನು ತಾಯಿಯ ಮನೆಗೆ ವಾಪಸ್ಸು ಬಂದೆ. ನಂತರ ಎದುರುದಾರರು ಬಂದು ಜಗಳ ಮಾಡಿಕೊಂಡು ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋದರು. ನಂತರ ನಾನು 2-3 ದಿನ ಅವರ ಮನೆಯಲ್ಲಿ ಇದ್ದೆ. ಸಾಲ ತೆಗೆದುಕೊಂಡ ಸಂಘದವರು ಹಣ ಕೇಳುತ್ತಾ ಮನೆಯ ಹತ್ತಿರ ಬರುತ್ತಿದ್ದರು. ನಾನು ಎದುರುದಾರರ

ಜೊತೆ ಉಳಿತಾಯದ ಹಣವನ್ನು ಬ್ಯಾಂಕ್ ನಿಂದ ತರಬೇಕು ಎಂದು ಪಕ್ಕದಲ್ಲಿರುವ ಬ್ಯಾಂಕ್ ಗೆ ಹೋದೆ. ಅಲ್ಲಿ ಹಣ ತೆಗೆದುಕೊಳ್ಳಲು ಸಮಸ್ಯೆಯಾಗಿದ್ದರಿಂದ ಮಳವಳ್ಳಿಗೆ ಹೋಗಲು ಹೇಳಿದರು. ಎದುರುದಾರರು ನಮ್ಮ ಮನೆಯ ಹತ್ತಿರ ಬಂದು ಬೈಕನ್ನು ನಿಲ್ಲಿಸಿದರು. ನಾನು ಹಣ ತೆಗೆದುಕೊಳ್ಳಲು ಮಳವಳ್ಳಿಗೆ ಹೋಗಲೇಬೇಕು ಎಂದು ಹೇಳಿದಾಗ ನೀನು ಯಾವನ ಜೊತೆ ಹೋಗಬೇಕು ಎಂದು ಹೇಳಿ ರಸ್ತೆಯ ಮಧ್ಯೆ ನನ್ನ ಜೊತೆ ಜಗಳ ತೆಗೆದರು. ಎದುರುದಾರರು ಮತ್ತು ಅವರ ತಂದೆ ತಾಯಿ ರಸ್ತೆಯಲ್ಲಿಯೇ ನನಗೆ ಚೆನ್ನಾಗಿ ಹೊಡೆದರು. ರಸ್ತೆಯಿಂದ ಮನೆ ತುಂಬಾ ದೂರ ಇದ್ದು, ರಸ್ತೆಯಿಂದ ಮನೆಯವರೆಗೆ ಎದುರುದಾರರು ಮತ್ತು ಅವರ ತಂದೆ ತಾಯಿ ನನ್ನ ಕೂದಲು ಹಿಡಿದು ಎಳೆಯುತ್ತಾ ಹೋದರು. ಆನಂತರ ನನ್ನನ್ನು ಹೊರಗೆ ಹೋಗಲು ಬಿಡಲಿಲ್ಲ ಹಾಗೂ ಮಗಳನ್ನು ನನ್ನ ಜೊತೆ ಸೇರಲು ಬಿಡಲಿಲ್ಲ. ನನ್ನ ತಂದೆ ತಾಯಿಯನ್ನು ಫೋನ್ ಮಾಡಿ ಎದುರುದಾರರೇ ಕರೆಸಿಕೊಂಡರು. ನಿಮ್ಮ ಮಗಳು ನನಗೆ ಬೇಡ, ನಿಮ್ಮ ಜೊತೆ ಕರೆದುಕೊಂಡು ಹೋಗಿ ನನ್ನ ಜೊತೆ ಇಲ್ಲಿ ಇರುವುದು ಬೇಡ ಎಂದು ಹೇಳಿದರು. ಆಗ ನನ್ನ ತಂದೆ ತಾಯಿ ಜಗಳ ಮಾಡಿದ್ದಿರಾ ಅವಳಿಗೂ ಕೂಡ ವಿಶ್ರಾಂತಿ ಬೇಕಾಗಿದೆ ಎಂದು ಹೇಳಿ ನನ್ನನ್ನು ಕರೆದುಕೊಂಡು ಹೋದರು. ನಂತರ ಎದುರುದಾರರು ಸುಮಾರು ಜನರನ್ನು ಕರೆದುಕೊಂಡು ನ್ಯಾಯ ಮಾಡಬೇಕೆಂದು ನನ್ನ ತವರು ಮನೆ ಹತ್ತಿರ ಬಂದರು. ನನ್ನ ಚಿಕ್ಕಮ್ಮನ ಮನೆಗೆ ಹೋಗಿ ಅಲ್ಲಿಯೇ ನ್ಯಾಯ ಮಾಡಬೇಕು ಎಂದು ಹಠ ಹಿಡಿದರು. ನಮಗೂ ನಮ್ಮ ಚಿಕ್ಕಮ್ಮನಿಗೂ ಆಗಿಬರುತ್ತಿರಲಿಲ್ಲ, ಎದುರುದಾರರ ಜೊತೆ ಬಂದಿದ್ದವರು ಎದುರುದಾರರ ಮನೆಗೆ ಬರುತ್ತೀಯಾ ಇಲ್ಲವಾ ಎಂದು ಕೇಳಿದರು. ಇಷ್ಟೇಲ್ಲಾ ಆದ ಮೇಲೆ ಬರುವುದಿಲ್ಲ ಎಂದು ನಾನು ಹೇಳಿದೆ. ಆಗ ಎದುರುದಾರರ ಜೊತೆ ಬಂದವರು ವಿಚ್ಛೆಧನೆ ಕೊಡುತ್ತೇನೆ ಎಂದು ಒಪ್ಪಿಕೊಂಡರೆ ಮಾತ್ರ ಇಲ್ಲಿಂದ ಹೋಗುವುದಾಗಿ ಅದನ್ನು ವಿಡಿಯೋ ಮಾಡಿಕೊಳ್ಳುತ್ತ್ತೀವೆ ಎಂದು ಹೇಳಿದರು. ಆಗ ನಾನು ಅವರ ಜೊತೆ ಬರಬಾರದು ಎಂದು ಎದುರುದಾರರು ಅಂದುಕೊಂಡಿರುವ ಕಾರಣ ಅವರಿಗೆ ವಿಚ್ಛೆದನೆ ಕೊಡುತ್ತೇನೆ ಎಂದು ನಾನು ಹೇಳಿದೆ. ಜಗಳ ಮಾಡಿಕೊಂಡು ಅವರು ಹೊರಟು ಹೋದರು. ಒಂದು ವಾರ ಬಿಟ್ಟು ನಿನ್ನ ಅಕ್ಕನ ಮನೆಗೆ ಬರುತ್ತೇವೆ ಎಂದು ಹೇಳಿ ಹೋದರು. ಅಲ್ಲಿಯೇ ಪಕ್ಕದಲ್ಲಿದ್ದ ನನ್ನ 3ನೇ ಅಕ್ಕನ ಮನೆಗೆ ಹೋದೆವು. ಅಲ್ಲಿ 5-6 ಜನ ಬಂದಿದ್ದರು. ನನ್ನ ತಂದೆ ತಾಯಿ ನನ್ನನ್ನು ಒಪ್ಪಿಸಿ ನನ್ನ ಅಕ್ಕನ

ಜೊತೆ ಎದುರುದಾರರ ಮನೆಗೆ ಕಳುಹಿಸಿದರು. ಬೆಳಗಿನ ಜಾವ 4 ಗಂಟೆಗೆ ನನ್ನನ್ನು ಮತ್ತು ನನ್ನ ಅಕ್ಕನನ್ನು ಎಬ್ಬಿಸಿ ಅವಳು ಇಷ್ಟು ದಿನ ಎಲ್ಲಿದ್ದಳೋ ಗೊತ್ತಿಲ್ಲ ದೇವರಿಗೆ ಕೂರಿಸಬೇಕು ಎಂದು ಹೇಳಿದರು.

(**ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.